


International Journal of Kannada Research
www.kannadajournal.com

**ISSN: 2454–5813**
IJSR 2016; 2(3): 65-68
© 2016 IJKS
www.kannadajournal.com
Received: 12-04-2016
Accepted: 11-05-2016

**Raghavendra A Kulkarni**
Assistant Professor In Music,
N.V. Degree College,
S.B.Temple Road, Kalaburagi,
Karnataka-585103.

**Correspondence**
**Raghavendra A Kulkarni**
Assistant Professor In Music,
N.V. Degree College,
S.B.Temple Road, Kalaburagi,
Karnataka-585103

# ಹಿಂದೂಸ್ತಾನಿ ಸಂಗೀತದಲ್ಲಿ ಗಾಯನ ಪ್ರಕಾರಗಳು

**Raghavendra A Kulkarni**

ಸಂಗೀತವು ಸಾಗರವಿದ್ದಂತೆ, ಇಂತಹ ಸಾಗರದಲ್ಲಿ ಪಂಡಿತರು ಕಲಾವಿದರು ತಮ್ಮಲಿರುವ ಪ್ರತಿಭೆಯಿಂದ ವಿಶೇಷವಾಗಿ ತಮ್ಮ ಸಂಗೀತ ಕಲೆಯಲ್ಲಿ ಅನೇಕ ಪ್ರಕಾರದ ವಿದ್ವತ್ ಪೂರ್ಣವಾದ ಸಂಗೀತ ಶೈಲಿಗಳನ್ನು ಸಂಗೀತ ಲೋಕಕ್ಕೆ ನೀಡಿದ್ದಾರೆ. ಇಂತಹ ಶೈಲಿಗಳನ್ನು ವಿಶೇಷವಾಗಿ ನಾವು ಹಿಂದೂಸ್ತಾನಿ ಸಂಗೀತದಲ್ಲಿ ಕಾಣುತ್ತೇವೆ. ಇಂತಹ ಶೈಲಿಗಳನ್ನು ಹಿಂದೂಸ್ತಾನಿ ಪದ್ಧತಿಯಲ್ಲಿ "ಗಾಯನ ಶೈಲಿ" ಅಥವಾ "ಗಾಯನ ಪ್ರಕಾರ" ಎಂದು ಕರೆಯಲಾಗುತ್ತದೆ. ಈ ರೀತಿಯ ಗಾಯನ ಪ್ರಕಾರಗಳು ಸಂಗೀತದ ವಿವಿಧ "ಘರಾಣೆ"ಗಳು ಹುಟ್ಟುವುದಕ್ಕೆ ಕಾರಣೀಭೂತವಾಗಿವೆ.

ಹಿಂದೂಸ್ತಾನಿ ಸಂಗೀತ ಪ್ರಪಂಚದಲ್ಲಿ ಪ್ರಮುಖವಾಗಿ ಸಂಗೀತ ಪ್ರಕಾರಗಳು ದೃಪದ, ಧಮಾರ, ಟಪ್ಪಾ, ದಾದ್ರಾ. ತರಾನ, ಠುಮ್ರಿ, ಖಯಾಲ, ತಿರ ವಟ್, ಚತುರಂಗ, ಸರಗಮ್, ರಾಗಮಾಲಾ, ಲಕ್ಷಣಗೀತೆ' ಮುಂತಾದವುಗಳನ್ನು ಕಾಣುತ್ತೇವೆ. ಈ ಗಾಯನ ಪ್ರಕಾರಗಳಲ್ಲಿ ಕೆಲವು ಮಾತ್ರ ಪ್ರಚಾರದಲ್ಲಿದ್ದು ಈಪರಂಪರೆಯನ್ನು ಅನೇಕ ಕಲಾವಿದರು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದರೆ ಕೆಲವು ಸಂಗೀತ ಪ್ರಕಾರಗಳು ಮಾಯವಾಗುತ್ತಿರುವುದು ವಿಷಾದದ' ಸಂಗತಿ.

ಈ ಮೇಲಿನ ಗಾಯನ ಪ್ರಕಾರಗಳ ಬಗ್ಗೆ ಸಂಕ್ಷಿಪ್ತವಾಗಿ ಇಲ್ಲಿ ವಿಮರ್ಶಿಸಲಾಗಿದೆ.

**ದೃಪದ ;** ದೃಪದ ಗಾಯನ ಶೈಲಿಯು ಯಾವಾಗ ಅವಿಷ್ಕಾರವಾಯಿತು, ಯಾವಾಗ ಜನ್ಮ ತಾಳಿತು ಎಂಬುದರ ಬಗ್ಗೆ ಸಂಗೀತ ವಿದ್ವಾಂಸರಲ್ಲಿ, ಸಂಗೀತಜ್ಞರಲ್ಲಿ ಭಿನ್ನಾಭಿಪ್ರಾಯಗಳಿರುವುದರಿಂದ ಖಚಿತವಾಗಿ ಹೇಳಲು ಬರುವಂತಿಲ್ಲ. ಕೆಲವು ಪಂಡಿತರ ಪ್ರಕಾರ 13 ನೇ ಶತಮಾನದಲ್ಲಿ, ಇನ್ನೂ ಕೆಲವು ವಿದ್ವಾಂಸರ ಪ್ರಕಾರ 15 ನೇ ಶತಮಾನದಲ್ಲಿ ಆಗಿರಬಹುದೆಂದು ಹೇಳುವದುಂಟು. ಗ್ವಾಲಿಯರದ ರಾಜಾ ಮಾನಸಿಂಹ ತೋಮರ ದೃಪದ ಗಾಯನ ರಚನೆ ಮಾಡಿ ಅವಿಷ್ಕಾರ ಮಾಡಿ ಪ್ರಚಾರಕ್ಕೆ ತಂದನು ಎನ್ನುತ್ತಾರೆ. ಅಕ್ಬರನ ಕಾಲದಲ್ಲಿ ಸ್ವಾಮಿ ಹರಿದಾಸ ಅವರ ಶಿಷ್ಯ ತಾನಸೇನ, ಗೋಪಾಲ ನಾಯಕ, ಬೈಜು ಬಾವರಾ ಮುಂತಾದವರು ದೃಪದ ಗಾಯನದ ರೂವಾರಿಗಳು. ಆದರೆ ರಾಜಾ ಮಾನಸಿಂಹ ತೋಮರ ಈ ಗಾಯನ ಪ್ರಕಾರದ ಬೆಳವಣಿಗೆ ಮಾಡಿ ಪ್ರಚಾರಕ್ಕೆ ತರಲು ಹೆಚ್ಚಿನ ಆಸಕ್ತಿ ವಹಿಸಿದ್ದ ಎನ್ನಬಹುದು. ಈ ಅಭಿಪ್ರಾಯವನ್ನೇ ಬಹಳಷ್ಟು ಪಂಡಿತರು, ವಿದ್ವಾನರು ಒಪ್ಪಿಕೊಳ್ಳುತ್ತಾರೆ.

ದೃಪದ ಗಾಯನ ಪದ್ಧತಿಯು ಸಾಧಾರಣವಾಗಿ ಹಿಂದಿ, ಉರ್ದು ಮತ್ತು ಬ್ರಿಜ ಭಾಷೆಗಳಲ್ಲಿ ವಿಶೇಷವಾಗಿದ್ದು, ಈ ಗಾಯನ ಶೈಲಿಯು ಬಹಳ ಗಂಭೀರವಾದದ್ದು, ಈ ಗಾಯನ ಶೈಲಿಯು ಪೌರುಷಯುಕ್ತ ಪ್ರಭಾವಶಾಲೀ ಕಂಠಕ್ಕೆ ಸರಿಹೊಂದುತ್ತದೆ. ಈ ಗಾಯನ ಶೈಲಿಯ ಸಂಯೋಜನೆ "ನೂಂತೋಂ" ದಿಂದ ಪ್ರಾರಂಭವಾಗುತ್ತದೆ. ಇಲ್ಲಿ ಗಮಕ, ಬೋಲ್‌ತಾನ, ಲಯದ ದುಗನ್, ತಿಗುನ್, ಚೌಗುನ್, ಅಠಗುಣ ಮುಂತಾದ ಲಯಗಳಲ್ಲಿ ಹಾಡುತ್ತಾರೆ. ಈ ಗಾಯನ ಶೈಲಿ ವಿಶೇಷವಾಗಿ ವೀರ, ಶೃಂಗಾರ, ಶಾಂತ ಮತ್ತು ಭಕ್ತಿ ರಸ ಪ್ರಧಾನವಾಗಿದ್ದು, ಈ ಗಾಯನದಲ್ಲಿ ಅತಿ ಕಟ್ಟುನಿಟ್ಟಾದ ನಿಯಮ ಅನುಸರಿಸಲ್ಪಡುತ್ತಿದ್ದು, ಲಯಕಾರಿ ಬಹಳ ಪ್ರಭಾವಶಾಲಿಯಾಗಿದೆ. ವಿಶೇಷವಾಗಿ ಚೌತಾಲ, ಸೂಲ ಘಾಕ, ತೇವ್ರಾ, ಬ್ರಹ್ಮತಾಲ, ಶಿಖರತಾಲ, ರುದ್ರತಾಲ ಮುಂತಾದ ಪಖವಾಜ ತಾಲಗಳಲ್ಲಿ ಹಾಡಲಾಗುತ್ತದೆ.

ಈ ಗಾಯನಕ್ಕೆ ಮೂಲತಃ ಪಖವಾಜ ವಾದ್ಯವೇ ತಾಲವಾದ್ಯವಾಗಿದೆ. ಆದರೆ ಇತ್ತೀಚಿಗೆ ತಬಲಾ ವಾದ್ಯದ ಜೊತೆಗೆ ಹಾಡುವುದನ್ನು ಕಾಣಬಹುದಾಗಿದೆ. ಇಲ್ಲಿ ತಬಲಾದ ಬೋಲ ವರ್ಣಗಳನ್ನು ಖುಲ್ಲಾ ಬಾಜದಲ್ಲಿ ನುಡಿಸುತ್ತಾರೆ. ದೃಪದ ಗಾಯನ ಶೈಲಿಯಲ್ಲಿ ನಾಲ್ಕು ವಾಣಿಗಳು ಅಥವಾ ನಾಲ್ಕು "ಬಾನಿ"ಗಳು ಪ್ರಚಾರದಲ್ಲಿ ಬಂದಿವೆ.

1) ಗೋಬರ ಹರವಾಣಿ ಅಥವಾ ಶುದ್ಧವಾಣಿ.
2) ಖಂಡಾರವಾಣಿ
3) ಡಾಗೂರವಾಣಿ
4) ನೋಹರವಾಣಿ

**ಧಮಾರ :** ಧಮಾರ ಎಂಬ ಹದಿನಾಲ್ಕು (14) ಮಾತ್ರೆಯ ತಾಲದಲ್ಲಿ ರೂಪಗೊಳ್ಳುತ್ತದೆ. ಈ ಗೀತ ಪ್ರಕಾರವು ಧ್ರುಪದ ಗೀತ ಪ್ರಕಾರದ ಗಾಯನ ಶೈಲಿಯನ್ನು ಹೋಲುತ್ತದೆ. ಧಮಾರ ಗೀತ ಪ್ರಕಾರ ಕೃಷ್ಣನ ಬಾಲ್ಯ ಜೀವನದ ಲೀಲೆಗಳ ಕ್ರೀಡೆಗಳ ವರ್ಣನೆಯಿಂದ ಕೂಡಿದ್ದು, ಹೋಳಿ ಹಬ್ಬದ ಆಚರಣೆಯ ವರ್ಣನೆಯೂ ಬರುತ್ತದೆ. ಧಮಾರ ಗೀತ ಪ್ರಕಾರವು ನಿಬದ್ಧವಾದ ಹಾಡುಗಾರಿಕೆಯಾಗಿದ್ದು, ಇದರಲ್ಲಿ ಶಬ್ದ ಸಾಹಿತ್ಯವು ಅಷ್ಟು ಪ್ರೌಢವಾಗಿ ಇರುವುದಿಲ್ಲ. ಧಮಾರದಲ್ಲಿ ದುಗನ್, ತಿಗುನ್, ಚೌಗುನ್ ಲಯದಲ್ಲಿ ಬೋಲ್‌ತಾನ ಗಮಕ ಮುಂತಾದವುಗಳು ಅನಿವಾರ್ಯವಾಗಿವೆ. ಈ ಗಾಯನ ಪದ್ಧತಿಗೆ ಗಮಕ ಪ್ರಯೋಗಕ್ಕೆ ವಿಶೇಷ ಸ್ಥಾನಮಾನವಿದ್ದು, ಆಯಾ ರಾಗದ ರಚನೆಯ ಶಬ್ದಗಳನ್ನು ವಿವಿಧ ಲಯಕಾರಿಗಳೊಂದಿಗೆ ಧಮಾರ ತಾಲದ ಚೌಕಟ್ಟಿನಲ್ಲಿ ಹಾಡುವುದುಂಟು. ಧ್ರುಪದ ಗೀತ ಪ್ರಕಾರದಂತೆ ಧಮಾರ ಗಾಯನದಲ್ಲಿಯೂ ಗಂಭೀರತೆ ಹೊಂದಿದೆ. ಈ ಗೀತ ಪ್ರಕಾರಕ್ಕೆ ಪಕ್ಕ ವಾದ್ಯವಾಗಿ ಪಖವಾಜನ್ನು ಬಳಸಲಾಗುತ್ತಿತ್ತು. ಇತ್ತೀಚಿಗೆ ಈ ಗೀತ ಪ್ರಕಾರವನ್ನು ತಬಲಾ ವಾದ್ಯದೊಂದಿಗೆ ಹಾಡುವುದು ರೂಢಿಉಂಟು. ಇನ್ನು ತಬಲಾದಲ್ಲಿ ನುಡಿಸುವ ಅಕ್ಷರಗಳನ್ನು ಖುಲ್ಲಾ ಬಾಜದಲ್ಲಿ ನುಡಿಸುತ್ತಾರೆ.

**ಟಪ್ಪಾ :** ಈ ಗೀತ ಪ್ರಕಾರವು 17 ನೇ ಶತಮಾನದ ಮೊದಲ ಭಾಗದಲ್ಲಿ ಪ್ರಚಾರದಲ್ಲಿ ಬಂದಿತು. "ಟಪ್ಪಾ" ಎಂಬ ಶಬ್ದವು ಪಂಜಾಬಿ ಭಾಷೆಯಿಂದ "ಟಪ್ಪನಾ" ಅಂದರೆ ಜಿಗಿ ಅಥವಾ ಹಾರು ಎಂಬ ಅರ್ಥದಲ್ಲಿ ಹೇಳುತ್ತಾರೆ. ಐಪ್ಪಾ ಗಾಯನ ಶೈಲಿಯು ಲಘು ಗಾಯನ ಶೈಲಿಯಾಗಿದ್ದು ಪ್ರಸ್ತುತ ಟಪ್ಪಾ ಗಾಯನ ಶೈಲಿಯಲ್ಲಿ ಹಾಡುವ ಕಲಾವಿದರ ಸಂಖ್ಯೆಯು ಕುಂಠಿತವಾಗಿದೆ. ಅಪರೂಪವಾಗಿ ಕೆಲವು ಕಲಾವಿದರು ನಮಗೆ ದೊರೆಯುತ್ತಾರೆ. ಟಪ್ಪಾ ಪದ್ಧತಿಯ ಗೀತೆ ರಚನೆಗಳು ಹೆಚ್ಚಾಗಿ ಪಂಜಾಬಿ ಭಾಷೆಯಲ್ಲಿದ್ದು ಅತ್ಯಂತ ಕಡಿಮೆ ಶಬ್ದಗಳಿಂದ ಕೂಡಿರುತ್ತದೆ. ಸ್ಥಾಯಿ ಮತ್ತು ಅಂತರಾ ಎಂಬ ಎರಡೇ ಭಾಗಗಳಿದ್ದು, ಟಪ್ಪಾದ ಶೈಲಿಯು ಸ್ವಭಾವದಿಂದ ಚಂಚಲ ಗಾಯನವಾಗಿದ್ದು ಶೃಂಗಾರ ರಸಪ್ರಧಾನವಾಗಿದೆ. ಈ ಟಪ್ಪಾ ಗೀತ ಪ್ರಕಾರ ಸಿಂಧ ಮತ್ತು ಪಂಜಾಬಗಳಲ್ಲಿ ಇಂದಿಗೂ ಪ್ರಚಲಿತ "ಟಪ್ಪೆ" ಎಂಬ ಜಾನಪದ ಗೀತಶೈಲಿಯಿಂದ ಟಪ್ಪಾ ಗಾಯನ ಶೈಲಿಯು ಉಗಮವಾಯಿತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆದರೆ ಶಾಸ್ತ್ರೀಯ ಸಂಗೀತಗಾರರು ಶಾಸ್ತ್ರಬದ್ಧವಾಗಿ ಹಾಡಲಾಗುವ ಈ ವಿಶಿಷ್ಟವಾದ ಶೈಲಿಯು ಪಂಜಾಬದ ಲೋಕಗೀತಕ್ಕಿಂತ ಭಿನ್ನವಾಗಿದೆ. ಪಂಜಾಬದ ವ್ಯಾಪರಸ್ಥರು ಒಂಟೆಗಳ ಮೇಲೆ ತಮ್ಮ ಸಾಮಾನು ಹೇರಿಕೊಂಡು ಮರಭೂಮಿಯಲ್ಲಿ ಪ್ರಯಾಣ ಮಾಡುವಾಗ ನಡೆಯುವ ದಾರಿಯ ದೂರವನ್ನು ಮರೆಯಲು ಜಾನಪದ ಶೈಲಿಯಲ್ಲಿ ಒಂಟಿ ನಡುಗೆಯ ಲಯದಲ್ಲಿ ಹಾಡುವಾಗ "ಟಪ್ಪಾದ" ಮೂಲ ಸೂತ್ರವನ್ನು ಕಂಡು ಹಿಡಿಯಲಾಯಿತೆಂದು ತಿಳಿದು ಬರುತ್ತದೆ. 18 ನೇ ಶತಮಾನದಲ್ಲಿ ಶೋರಿ ಮೀಯಾ ಅವರು ಒಮ್ಮೆ ವ್ಯಾಪಾರೀ ಸ್ನೇಹಿತರೊಟ್ಟಿಗೆ ಒಂಟಿಯ ಮೇಲೆ ಸವಾರಿ ಮಾಡುತ್ತಿದ್ದಾಗ ಲಹರಿಗಾಗಿ ಹಾಡತೊಡಗಿದರು. ಅವರ ಹಾಡು ಒಂಟಿಯ ನಡಿಗೆಗೆ ಅನುಗುಣವಾಗಿತ್ತು. ಒಂಟಿ ನಡಿಗೆಯ ವಿಶೇಷ ರೀತಿಯ ಧ್ವನಿಯ ಮಾರ್ಪಾಟವನ್ನು ತಮ್ಮ ಕಂಠದಲ್ಲಿ ಕಂಡುಕೊಂಡು ಅದಕ್ಕೆ ಒಂದು ಶಾಸ್ತ್ರೀಯ ಸ್ವರೂಪವನ್ನು ತಂದುಕೊಂಡರು. ಇದೇ ಟಪ್ಪಾ ಗಾಯನ ಶೈಲಿಯು ಪ್ರಚಾರದಲ್ಲಿದೆ.

**ದಾದ್ರಾ:** ದಾದ್ರಾ ಗಾಯನ ಶೈಲಿಯು ಠುಮ್ರಿ ಮತ್ತು ಗಝಲ್ ಶೈಲಿಗಳನ್ನು ಹೋಲುತ್ತದೆ. ಈ ಶೈಲಿಯು ಶೃಂಗಾರ ರಸ ಪ್ರಧಾನವಾಗಿದ್ದು, ಭಾರತದ ಉತ್ತರ ಭಾಗದಲ್ಲಿ ಪ್ರಸಿದ್ಧಿ ಪಡೆದಿದ್ದು, ಈ ಗಾಯನ ಶೈಲಿಯು "ದಾದರಾ" ತಾಲದಲ್ಲಿಯೇ ಹಾಡುತ್ತಾರೆ. ಅದಕ್ಕೆ ಈ ಗೀತ ಪ್ರಕಾರಕ್ಕೆ ದಾದ್ರಾ ಎಂಬ ಹೆಸರು ಬಂದಿದೆ.

**ತರಾನಾ:** ತರಾನಾ ಗಾಯನ ಪದ್ಧತಿಯು ತನ್ನದೇ ಆದ ವಿಶೇಷ ಲಕ್ಷಣಗಳನ್ನು ಹೊಂದಿದೆ. ತರಾನಾದಲ್ಲಿ ತಾ.ನಾ. ತದರೆ, ಉದ ತನ, ದೀಮ ಇತ್ಯಾದಿ ಅರ್ಥವಿಲ್ಲದ ಶಬ್ದಗಳು ಅಕ್ಷರಗಳ ಪ್ರಯೋಗವಿರುತ್ತದೆ. ಈ ಶೈಲಿಯನ್ನು ಖ್ಯಾಲ ಗಾಯನದ ಪ್ರಕಾರವೆಂದು ಪರಿಗಣಿಸುತ್ತಾರೆ. ಇದು ಖ್ಯಾಲ ಗಾಯನದ ಎಲ್ಲಾ ರಾಗಗಳಲ್ಲಿ ಹಾಡಲಾಗುತ್ತದೆ. ತರಾನಾ ಗಾಯನದ ಮೂಲ ಉದ್ದೇಶ ಸಂಗೀತದಲ್ಲಿ ಧ್ವನಿಯ ಮತ್ತು ಲಯಕಾರಿಗಳನ್ನು ತಯಾರಿ ಮಾಡವುದಕ್ಕೆ ಶಬ್ದಗಳ ಸ್ಪಷ್ಟ ಉಚ್ಚಾರಣೆ ಮಾಡಿ ಹಾಡುವುದಕ್ಕೆ ತರಾನಾ ಪ್ರಮುಖ ಗಾಯನ ಶೈಲಿಯಾಗಿದೆ. ವಿಲಂಬಿತ್ ಲಯದಲ್ಲಿ ತರಾನಾದ ರಚನೆಯು ಪಖವಾಜ ಹಾಗೂ ತಬಲಾ ಬೋಲ್ ಮಾರ್ಗಗಳನ್ನು ಒಳಗೊಂಡಿರುತ್ತದೆ. ದೃತ್‌ಲಯದಲ್ಲಿ ತರಾನಾ ಹಾಡುವದರಿಂದ ಕಂಠವು ಶುದ್ಧವಾಗಿ ಶಬ್ದ ಮತ್ತು ಸ್ವರ ಉಚ್ಚಾರಣೆಯಲ್ಲಿ ಶುದ್ಧತೆಯನ್ನು ಸಾಧಿಸಲಾಗುತ್ತದೆ.

ಅಮೀರ ಖುಸ್ರೋ ಅರಬ್ಬೀ ಭಾಷಾ ವಿಶಾರದವಾಗಿದ್ದರಿಂದ ಭಾರತಿಯ ಸಂಸ್ಕೃತ ಭಾಷೆಯ ಪರಿಜ್ಞಾನವು ಆತನಿಗಿರಲಿಲ್ಲ. ಹೀಗಾಗಿ ಭಾರತೀಯ ರಾಗಗಳನ್ನು ಹಾಡುವಾಗ "ನೂಂ ತೋಂ" ಮುಂತಾದ ಅರ್ಥವಿರದ ಶಬ್ದಗಳ ಸಹಾಯಕೋರಿದನೆಂದೂ ಇದೇ ಮುಂದೆ "ತರಾನಾ" ಶೈಲಿಯನ್ನು ಕಂಡು ಹಿಡಿಯುವದಕ್ಕೆ ಸಹಾಯವಾಯಿತೆಂದು ತಿಳಿದು ಬರುತ್ತದೆ. ತರಾನಾವನ್ನು ಪ್ರಚಲಿತವಿರುವ ಪ್ರಮುಖ ತಾಲಗಳಲ್ಲಿ ನಿಬದವಾಗಿದ್ದು ಕಂಡು ಬರುತ್ತದೆ.

**ಠುಮ್ರಿ:** ಠುಮ್ರಿ ಗಾಯನ ಪದ್ಧತಿಯು ಭಾವನಾ ಪ್ರಧಾನವಾದ ಗಾಯನ ಪದ್ಧತಿಯಾಗಿದ್ದು ರಸಮುವಾಗಿದೆ. ಖ್ಯಾಲ ಗಾಯನಕ್ಕಿಂತ ಠುಮ್ರಿ ಗಾಯನದಲ್ಲಿ ಶಾಸ್ತ್ರದ ಬಿಗಿ ಬಂಧನಗಳು ಇಲ್ಲದಿದ್ದರೂ ಗಾಯನ ಶೈಲಿಯಲಿಯಲ್ಲಿ ನಿಯಮ ನಿಯಂತ್ರಣ ಕಂಡು ಬರುತ್ತದೆ. ಈ ಗಾಯನ ಶೈಲಿಯಲ್ಲಿ ಶೃಂಗಾರ ಮತ್ತು ಕರಗಾ ರಸಗಳು ಪ್ರಧಾನ ರಸಗಳಾಗಿವೆ. ಒಂದು ರಾಗದಲ್ಲಿ ಠುಮ್ರಿ ಹಾಡುವಾಗ ಖ್ಯಾಲ ಗಾಯನ ಶೈಲಿಗೆ ವ್ಯತಿರಿಕ್ತವಾಗಿ ಗಾಯಕನು ತನ್ನ ಭಾವನೆಯ ಪರಿಣಾಮಕಾರಿಯಾಗಿ ಬೆಳಗಲು ಬೇರೆ ಬೇರೆ ರಾಗಗಳ ಸಹಕಾರವನ್ನು ಪಡೆಯಬಹುದಾಘಿದೆ. ಈ ಠುಮ್ರಿ ಗಾಯನ ಶೈಲಿಯು ನೃತ್ಯ ಗೀತೆಯ ಭಾಗವಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸಂಗೀತದಲ್ಲಿಯ ಉತ್ತಮ ಅಂಶಗಳೆಲ್ಲವೂ ಠುಮ್ರಿ ಗಾಯನದಲ್ಲಿದೆ.

ಠುಮ್ರಿ ಗಾಯನ ಪದ್ಧತಿಯು ಶೋರಿ ಮನೆತನದ "ಗುಲಾಮನಬಿ" ಇವರಿಂದ ಅವಿಷ್ಕಾರಗೊಂಡಿತು. ಮುಂದೆ ಅದು ಲಖನೌದ ವಝಿದ ಅಲಿಶಹಾ ಅವರ ದರಬಾರಿನಲ್ಲಿ ಪ್ರಚಾರವನ್ನು ಹೊಂದಿ ಪ್ರಸಿದ್ಧಿ ಪಡೆಯಿತು. ಅಲಿಖಾನ, ಶ್ರೀಮತಿ

ಸಿದ್ದೇಶ್ವರಿ ದೇವಿ, ಶ್ರೀಮತಿ ಬೇಗಂ ಅಖ್ತರ, ಗಿರಿಜಾದೇವಿ, ಶ್ರೀ ಸುರೇಶಬಾಬು ಮಾನೆ ಮುಂತಾದವರ ಹೆಸರುಗಳು ಪ್ರಸಿದ್ಧವಾಗಿವೆ.
ಠುಮ್ರಿಯು ಸಾಧಾರಣವಾಗಿ ದೇಶ್, ಖಮಾಜ, ಕಾಫಿ, ಪೀಲೂ, ಪಹಾಡಿ, ಭೈರವಿ ಮುಂತಾದ ರಾಗಗಳಲ್ಲಿ ವಿಶೇಷವಾಗಿ ಹಾಡುತ್ತಾರೆ. ಸಂಗೀತ ಕ್ಷೇತ್ರದಲ್ಲಿ ಠುಮ್ರಿ ಗಾಯಕರು ಬಹಳ ಕಡಿಮೆ. ಈ ಗಾಯನ ಶೈಲಿಗೆ ದೈವದತ್ತವಾದ ಕಂಠವಿರುವುದು ಅನಿವಾರ್ಯ. ಈ ಠುಮ್ರಿ ಗಾಯನ ಶೈಲಿಯಲ್ಲಿ ಪ್ರಮುಖವಾಗಿ ಪಂಜಾಬಿ, ಪೂರಬ, ದಿಲ್ಲಿ ಮತ್ತು ಪಹಾಡಿ ಎಂಬ ನಾಲ್ಕು ಅಂಗಗಳಿವೆ. ಲಖನೌ ಮತ್ತು ಬನಾರಸಗಳು ಠುಮ್ರಿ ಗಾಯನದ ಶೈಲಿಯ ಪ್ರಸಿದ್ಧ ಸ್ಥಾನಗಳಾಗಿವೆ. ಈ ಗಾಯನಕ್ಕೆ ದೀಪಚಂದಿ., ಆದ್ದಾ, ಕೆಹರವಾ, ದಾದರ ಮುಂತಾದ ತಾಲಗಳನ್ನು ಹೆಚ್ಚು ಬಳುಸವುದುಂಟು.

**ಖಯಾಲ್** : ಮೊದಲು ದೃಪದ ಗಾಯನವಿತ್ತು. ತದನಂತರ ಖ್ಯಾಲ ಸಂಗೀತ ಜನ್ಮ ತಾಳಿತು. ಖ್ಯಾಲ ಅಥವಾ ಖಯಾಲ್ ಫಾರಸೀ ಶಬ್ದವಾಗಿದ್ದು, **"ಕಲ್ಪನೆ"** ಎಂದು ಅರ್ಥವಾಗುತ್ತದೆ. ಕಲಾವಿದನು ಈ ಗಾಯನ ಶೈಲಿಯಲ್ಲಿ ತಮ್ಮ ತಮ್ಮ ಕಲ್ಪನೆ ಗಳನ್ನು ಗಾಯನದ ಮುಖಾಂತರ ವ್ಯಕ್ತಪಡಿಸುವ ಅವಕಾಶ ವಿರುವದರಿಂದ ಈ ಗಾಯನ ಶಯಲಿಗೆ **"ಖ್ಯಾಲ"** ಎಂದು ಪ್ರಚಾರದಲ್ಲಿದೆ. ಕಲಾವಿದನು ತನ್ನ ಕಲ್ಪನೆಯನ್ನು ರಾಗದ ಅಲಾಪ ಮತ್ತು ರಾಗದ ವಿಸ್ತಾರಗಳ ಮೂಲಕ ವ್ಯಕ್ತಪಡಿಸುವವು ಈ ಗಾಯನದ ಶೈಲಿಯಲ್ಲಿ ವಿವಿಧ ಸ್ವರ ವಿನ್ಯಾಸ, ಜಲ್ದತಾನ, ಬೋಲ್‌ತಾನ ಮುಂತಾದ ಸಂಗತಿಗಳ ಮುಖ್ಯ ಪಾತ್ರ ವಹಿಸುತ್ತವೆ. ಈ ರೀತಿಯಾಗಿ ವಿವಿಧ ರೀತಿಯ ಪ್ರಯೋಗಗಳಿಗೆ ಖ್ಯಾಲಿನ'ಲ್ಲಿ ಬಹಳಷ್ಟು ಅವಕಾಶಗಳಿವೆ. ಈ ಗಾಯನ ಶೈಲಿಯು ಶೃಂಗಾರ ಪ್ರಧಾನವಾಗಿದ್ದು, ಶೃಂಗಾರರಸ ಇತರ ರಸಭಾವಗಳೂ ವ್ಯಕ್ತವಾಗುತ್ತದೆ.
ಈ ಗಾಯನ ಶೈಲಿಯಲ್ಲಿ ದೃಪದ ಗಾಯನದಲ್ಲಿದ್ದಂತೆ ಹೆಚ್ಚಿನ ಕಟ್ಟು ನಿಟ್ಟುಗಳಲ್ಲಿದಿದ್ದರೂ ಖ್ಯಾಲ ಗಾಯನ ಶೈಲಿಗೆ ದೃಪದ ಶೈಲಿಯೇ ಮೂಲವಾಗಿದ್ದು ಶಾಸ್ತ್ರೀಯ ಸಂಗೀತ ಪದ್ಧತಿಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ. ಖ್ಯಾಲ ಗಾಯನದ ಪದ್ಧತಿಗೆ ದೃಪದ ಗೀತೆಗಳೇ ಮೂಲಾಧಾರಗಳಾಗಿವೆ. ದೃಪದ ಮತ್ತು ಖ್ಯಾಲ್ ಪದ್ಧತಿಗಳಲ್ಲಿ ಅಲಾಪ ಅವಶ್ಯಕವಾದ ಅಂಶವಾಗಿದೆ. ಈ ಗಾಯನ ಪದ್ಧತಿಗೆ ತಾಲವಾದ್ಯ ತಬಲ ವಾದ್ಯವನ್ನು ಉಪಯೋಗಿಸುತ್ತಾರೆ. ಈ ಗಾಯನಕ್ಕೆ ವಿಲಂಬಿತ್ ಎಕ್ತಾಲ, ಆಡಾಚಾತಾಲ ಝುಮರಾ, ತಿಲವಾಡ, ತ್ರಿತಾಲ ಮುಂತಾದ' ತಾಲಗಳಲ್ಲಿ ಹಾಡುತ್ತಾರೆ.
ಖ್ಯಾಲ ಗಾಯನದ ಅವಿಷ್ಕಾರವನ್ನು ಕುರಿತು ಪಂಡಿತರಲ್ಲಿ ಸಂಗೀತಜ್ಞರಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಅಮೀರ ಖುಸ್ರೊ ಆಧುನಿಕ ಕಾಲದ ಜನಕನೆಂದು ಪ್ರಸಿದ್ಧಿ ಪಡೆದಿದ್ದಾನೆ. ಆದರೆ ಮೂಲತಃ ಖ್ಯಾಲ ಗಾಯನದ ಅವಿಷ್ಕಾರವನ್ನು ಜೌನಪುರದ ಹುಸೇನ ಶರ್ಕಿ ಅವರು ಮಾಡಿದ್ದಾರೆ. ಈ ಗಾಯನ ಶೈಲಿಯ ಅವಿಷ್ಕಾರದ ಯಶಸ್ಸು ಶರ್ಕಿಗೆ ಸಲ್ಲುತ್ತದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಆಚಾರ್ಯ ಬೃಹಸ್ಪತಿಯವರು ಐತಿಹಾಸಿಕ ಆಧಾರಗಳ ಮೇಲಿಂದ ಜಾನಪುರದ ಹುಸೇನ ತರ್ಕಿಯೇ ಆಧುನಿಕ ಖ್ಯಾಲ ಗಾಯನದ ಜನಕನೆಂದು ಸಿದ್ಧ ಮಾಡಿದ್ದಾರೆ. 15 ನೇ ಶತಮಾನದಲ್ಲಿ ಹುಸೇನ ಶರ್ಕಿ ಅವರು ಖ್ಯಾಲಗಾಯನದ ಅವಿಷ್ಕಾರ ಮಾಡಿದ ನಂತರ ಮಹಮ್ಮದ ಶಹಾ ರಂಗೀಲೆ ಮತ್ತು ಆತನ ದರ್ಬಾರಿನಲ್ಲಿ ಪ್ರಸಿದ್ಧ ಸಂಗೀತ ಕಲಾವಿದರಾದ ಸದಾರಂಗ, ದಿಲರಂಗೆ, ಹರರಂಗ, ನಂತರ ದರಸಪಿಯಾ, ಲಲನಪಿಯಾ ಮುಂತಾದವರಿಂದ ಖ್ಯಾಲ ಸಂಗೀತ ಪದ್ದ ಜನಪ್ರಿಯಾವಾಯಿತು. ಆಧುನಿಕ ಹಿಂದೂಸ್ತಾನಿ ಸಂಗೀತ ಪದ್ಧತಿಯಲ್ಲಿ ಖ್ಯಾಲ ಗಾಯನ ಪದ್ಧತಿಯು ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದ್ದು ಜನಪ್ರಿಯ ಸಂಗೀತ ಶೈಲಿಯಾಗಿದೆ.

**ತಿರವಟ** : ಪ್ರಸ್ತುತ ತ್ರಿವಟ ಹಾಡುವ ಸಂಗೀತ ಕಲಾವಿದರೂ ಬೆರಣೀಕೆ'ಷ್ಟು ಇರಬಹುದು. ತಿರವಟ ಅಥವಾ ತ್ರಿವಟ ಶೈಲಿಯು ತರಾನಾ ಗಾಯನ ಶೈಲಿಯಂತೆ ಇದ್ದರೂ ತರಾನಾ ಗಾಯನ ಶೈಲಿಗಿಂತಲೂ ಕಠಿಣವಾಗಿದೆ. ಈ ಶೈಲಿಯಲ್ಲಿ ವಿಶೇಷವಾಗಿ ಮೃದಂಗದ ಬೋಲುಗಳಿಗೆ ವಿಶೇಷ ಮಹತ್ವವಿದೆ. ಕಾವ್ಯ, ತರಾನ, ಹಾಗೂ ಪಖವಾಜ ಅಥವಾ ತಬಲಾದ ಬೋಲುಗಳಿಂದ ಕೂಡಿದ ಶೈಲಿಗೆ ತ್ರಿವಟ್ ಎಂದು ಕರೆದಿದ್ದಾರೆ, ಈ ತ್ರಿವಟ್ ಗಾಯನವನ್ನು ಎಲ್ಲಾ ರಾಗಗಳಲ್ಲಿ ಹಾಡುತ್ತಾರೆ. ಈ ಗಾಯನ ಶೈಲಿಗೆ ಪಖವಾಜ ಮತ್ತು ತಬಲಾ ವಾದ್ಯಗಳು ಸಾಥಿವಾದ್ಯಗಳಾಗಿವೆ.

**ಚತುರಂಗ**: ನಾಲ್ಕು ಅಂಗಗಳಾದ ಖ್ಯಾಲ, ತರಾನಾ, ಸರಗಮ ಮತ್ತು ತಾಲದ ಬೋಲ್ ಅಕ್ಷರಗಳಿಂದ ಕೂಡಿದ್ದು ಖ್ಯಾಲ ಗಾಯನ ಶೈಲಿಯಲ್ಲಿ ಹಾಡುವಂತಹ ಗೀತ ಪ್ರಕಾರ ಈ ಗೀತ ಪ್ರಕಾರದಲ್ಲಿ ಖ್ಯಾಲ ಗೀತದ ಶಬ್ದಾಂಗ, ತರಾನಾ ಗೀತ ಪ್ರಕಾರದ ತನ, ದಿರ, ನೋಂ, ತೋಂ ಮುಂತಾದ ಅಕ್ಷರಗಳ ಅಂಗ. ಸರಿಗಮ ಅಂದರೆ ಸ್ವರಗಳನ್ನು ಹೇಳುವಂತಹ ಅಂಗ ಮತ್ತು ಪಖವಾಜ ವಾದ್ಯದ ಅಕ್ಷರಗಳಾದ ಧಿಂ ತಕಟ ಇತ್ಯಾದಿ. ಹೀಗೆ ನಾಲ್ಕು ಅಂಗಗಳನ್ನು ಕ್ರಮವಾಗಿ ಹಾಡಲಾಗುವುದು. ಈ ಗಾಯನ ಶೈಲಿ ಖ್ಯಾಲ ಶೈಲಿಯಂತದ್ದರು ಈ ಗೀತ ಪ್ರಕಾರದಲ್ಲಿ ತಾನಗಳನ್ನು ಮಾಡುವದಕ್ಕೆ ಅವಕಾಶವಿರುವುದಿಲ್ಲ.

**ಸರಗಮ್** : ಈ ಗೀತ ಪ್ರಕಾರವು ಸಂಗೀತ ಅಭ್ಯಾಸಕ್ಕೆ (ರೀಯಾಜ್) ಮಾಡುವುದಕ್ಕೂ ವಿಶೇಷವಾಗಿ ಸಂಗೀತದಲ್ಲಿ ಸಾಧನೆ ಮಾಡುವ ಹಿರಿಯ ಮತ್ತು ಕಿರಿಯ ಕಲಾವಿದರಿಗೆ ಈ ಗೀತ ಪ್ರಕಾರ ಬಹಳ ಉಪಯುಕ್ತವಾಗಿದೆ. ವಿಶೇಷವಾಗಿ ಈ ಗೀತ ಪ್ರಕಾರ ವಿದ್ಯಾರ್ಥಿಗಳಿಗೆ ಮುಖ್ಯವಾಗಿದೆ. ಈ ಗೀತ ಪ್ರಕಾರ ಪಂ. ವಿಷ್ಣು ನಾರಾಯಣ ಭಾತಖಂಡೆ ಯವರಿಂದ ಅವಿಷ್ಕಾರವಾಗಿದ್ದು ಇವರಿಂದಲೇ ಪ್ರಚಾರದಲ್ಲಿ ಬಂದಿತು.
ಈ ಗಾಯನ ಶೈಲಿಯಲ್ಲಿ ಶಾಸ್ತ್ರೀಯ ಸಂಗೀತ ರಾಗವನ್ನು ಬೇರೆ ಬೇರೆ ರಾಗಗಳಲ್ಲಿ ಹಾಗೂ ಬೇರೆ ಬೇರೆ ತಾಲಗಳಲ್ಲಿ ಕ್ರಮಬದ್ಧವಾಗಿ ಹಾಡುವವ ಕ್ರಮಕ್ಕೆ ಸರಗಮ ಗೀತೆ ಸ್ವರಗೀತೆ ಎಂದು ಹೇಳುತ್ತಾರೆ. ಈ ಶೈಲಿಯನ್ನು ವಿಶೇಷವಾಗಿ ರಾಗ'ದ ಜ್ಞಾನ ರಾಗದ ನಿಶ್ಚಿತ ತಯಾರಿಗೆ ಉಪಯುಕ್ತವಾಗಿದೆ. ಪ್ರಸ್ತುತ ಈ ಶೈಲಿಯು ಸಂಗೀತ ವಿದ್ಯಾರ್ಥಿಗಳಿಗೆ ಪರೀಕ್ಷೆಯ ಪಠ್ಯಕ್ರಮದಲ್ಲಿರುವುದರಿಂದ ಗುರು ಶಿಷ್ಯರಿಗೆ ಸೀಮಿತವಾಗಿದ್ದು ವೇದಿಕೆಗಳಲ್ಲಿ ಈ ಗೀತ ಪ್ರಕಾರ ಪ್ರಚಾರದಲ್ಲಿಲ್ಲ.

**ರಾಗಮಾಲಾ**: ಒಂದು ಗೀತೆಯನ್ನು ಪ್ರಾರಂಭಿಸಿ ನಿರ್ದಿಷ್ಟ ರಾಗದಲ್ಲಿ ನಿರ್ದಿಷ್ಟ ತಾಲದಲ್ಲಿ ಪ್ರಾರಂಭಿಸಿ ಮುಂದೆ ಗೀತದ ಸಾಲುಗಳನ್ನು ಬೇರೆ ಬೇರೆ ರಾಗದಲ್ಲಿ ವಿಸ್ತರಿಸುತ್ತಾ ಮೂಲತಾಲದ ಒಂದು ಆವರ್ತನದಲ್ಲಿ ಮುಗಿಸಿ ಪುನಃ ರಾಗದ ಮುಖದೊಂದಿಗೆ ಮೂಲ ತಾಲದ ಸಮ್‌ಗೆ ಬರುವ ವಿಶೇಷತೆಯು ಈ ರಾಗಮಾಲಾದ ಶೈಲಿಯಲ್ಲಿದೆ. ಈ ಶೈಲಿಯನ್ನು ಹಾಡುವುದಕ್ಕೆ ಬೇರೆ ಬೇರೆ ರಾಗಗಳಲ್ಲಿ ಪ್ರಭುತ್ವವಿರುವ ಕಲಾವಿದರಿಗೆ ಮಾತ್ರ ಈ ಶೈಲಿ ಕೈಗೆ ನಿಲುಕುವುದು. ಕೆಲವೊಂದು ಸಲ ಮೂಲ ತಾಲ ಲಯದಲ್ಲಿಯೇ ಬೇರೆ ಬೇರೆ ತಾಲಗಳನ್ನು ಬಳುಸುವುದೂ ಉಂಟು. ಇಂತಹ ವಿಶೇಷ ರೀತಿಯ ಗಾಯನ

ಶೈಲಿಗೆ ರಾಗಮಾಲ ಎಂದು ಹೇಳುವರು.

**ಲಕ್ಷಣ ಗೀತೆ**: ಲಕ್ಷಣ ಗೀತೆ ಪದ್ಧತಿಯೂ ಸಹ ಸರಗಮ್ ಗೀತದಂತಿದ್ದು ಈ ಗೀತ ಪ್ರಕಾರದಲ್ಲಿ ರಾಗದ ಶಾಸ್ತ್ರೀಯ ಮಾಹಿತಿ ರಾಗದ ಸ್ವರ ಜಾತಿ, ವಾದಿ, ಸಂವಾದಿ, ಸಮಯ, ಥಾಟ, ರಾಗದ ಮಖ್ಯಸ್ವರ, ರಾಗದಲ್ಲಿಯ ವರ್ಜಿತ ಸ್ವರ ಇವುಗಳ ಲಕ್ಷಣಗಳು ರಚನಾ ಬದ್ಧವಾಗಿದ್ದು ವಿಶೇಷವಾಗಿ ರಾಗದ ಲಕ್ಷಣಗಳನ್ನು ಹೇಳುತ್ತದೆ. ಪ್ರತಿಯೊಂದು ರಾಗದ ಲಕ್ಷಣಗಳನ್ನು ಲಕ್ಷದಲ್ಲಿಟ್ಟುಕೊಳ್ಳಲು ಸಹಕಾರಿಯಾಗಿದೆ. ಈ ಗೀತ ಪ್ರಕಾರವು ಪ್ರಾರಂಭಿತ ಸಂಗೀತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಫಿದೆ.
ಈ ರೀತಿಯಾಗಿ ಹಿಂದೂಸ್ತಾನಿ ಸಂಗೀತದಲ್ಲಿ ಅನೇಕ ಗಾಯನ ಪ್ರಕಾರಗಳ ತನ್ನದೇ ಆದ ವಿಶೇಷತೆಯನ್ನು ಹೊಂದಿದ್ದು, ಕೆಲವು ಗೀತ ಪ್ರಕಾರಗಳಿಂದ ಇಂದು ಹಿಂದೂಸ್ತಾನಿ ಸಂಗೀತ ವಿಶ್ವವ್ಯಾಪಿ ಬೆಳೆಯುತ್ತದೆ.

**ಆಧಾರ ಗ್ರಂಥಗಳು:**

1) ಸಂಗೀತ ಶಾಸ್ತ್ರ ದರ್ಪಣ –ಪ್ರೊ.ಎ.ಯು. ಪಾಟೀಲ್
2) ಸಂಗೀತ ಸಂಜೀವಿನಿ – ಪ್ರೊ. ರಾಜೀವ ಹಿರೇಮಠ
3) ಭಾರತೀಯ ಸಂಗೀತ ಚರಿತ್ರೆ – ಪ್ರೊ. ಬಿ.ಡಿ.ಪಾಠಕ.